ಮಾನ್ಯ ಶಾಸಕರು ರಾಜ್ಯದ್ಯಾಂತ ೫-೧೧ ರೂಗಳ ಭಾವಾ ಕಾಗದಗಳ ಕೊರತೆಯ ಬಗ್ಗೆ, ಮಾನ್ಯ ಮುಖ್ಯ ಮಂತ್ರಿಯವರಿಗೆ ಸಲ್ಲಿಸಿದ ಪತ್ರದ ನಕಲು ಕಾಪಾಯ ಇಲಾಖೆಗೆ ದಿನಾಂಕ ೫-೧೧-೮೬ ರಂದು ತಲುಪಿತ್ತು ಕಂಡಾಯ ಇಲಾಖೆಯು ಆ ಬಗ್ಗೆ ಕ್ರಮ ಕೈಗೆದುಕೊಂಡು ಮಾನ್ಯ ಶಾಸಕರಿಗೆ ದಿನಾಂಕ ೨೨-೧-೮೭ ರಂದು ಪತ್ರ ಮುಖೇನ ತಿಳಿಸಲಾಗಿದೆ.

೫) ಮಂಗಳೂರು ಹಳೆ ಬಂದರಿನ ಅಳಿವೆಯಲ್ಲಿ ಮರಳಿನ ತುಂಬಿ ಮೀನುಗಾರರಿಗೆ ಉಂಟಾಗಿರುವ ತೊಂದರೆ ಬಗ್ಗೆ

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮಂಗಳೂರು).—ತಿಳಿನೇ ನಿಯಮದ ಕರ್ನಾಟಕ ರಾಜ್ಯ ಸನ್ಮಾನ್ಯ ಸಚಿವರಾದ ಶ್ರೀ ಕೆ.ಎಂ. ಕೃಷ್ಣಾರೆಡ್ಡಿಯವರ ಗಮನವನ್ನು ಸೆಳೆದು ಈ ಕೆಳಕಂಡ ವಿಷಯ ವನ್ನು ಪ್ರಸ್ತಾಪಿಸ ಬಯಸುತ್ತೇನೆ.

ಮಂಗಳೂರು ಹಳೆಯ ಬಂದರಿನ ಬಳಿಯ ಅಳಿವೆಯಲ್ಲಿ ಬಹಳ ಮರಳು ತುಂಬಿದ್ದು ಮೀನುಗಾರರಿಗೆ ತುಂಬಾ ತೊಂದರೆಯಾಗಿದೆ. ಕಳೆದ ಅಕ್ಟೋಬರ್ ಮಾಹೆಯಲ್ಲಿ ಮಂಗಳೂರಿನಲ್ಲಿ ನಡೆದ ಅಖಿಲ ಕರ್ನಾಟಕ ಮೀನುಗಾರರ ಪರಿಷತ್ತಿನಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಸಚಿವರು ದಿಸೆಂಬರ್ ೮ರ ಒಳಗಾಗಿ ಸದರಿ ಪ್ರದೇಶದಲ್ಲಿ ಡ್ರೆಜ್ ಮಾಡಿ ಮರಳನ್ನು ತೆಗೆದು ಮೀನುಗಾರರಿಗೆ ಆಗುವ ತೊಂದರೆಯನ್ನು ತಪ್ಪಿಸುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಆ ದಿಸೆಯಲ್ಲಿ ಈವರೆಗೂ ಯಾವ ಕ್ರಮ ವನ್ನೂ ಕೈಗೊಂಡಿಲ್ಲ. ಆದ್ದರಿಂದ ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಆದೇಶ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ ಮತ್ತು ಎಷ್ಟು ಸಮಯದೊಳಗಾಗಿ ಸದರಿ ಕಾರ್ಯವನ್ನು ಪೂರ್ಣಗೊಳಿಸಲಾಗುವುದೆಂಬುದಾಗಿಯೂ ಹೇಳಿಕೆ ಕೂಡ ಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕಾ ರಾಜ್ಯ ಮಂತ್ರಿ ಯವರು).—

ಮಂಗಳೂರಿನ ಹಳೆ ಬಂದರಿನ ಅಳಿವೆಯಲ್ಲಿ ಹೂಳು ಆವರಿಸಿದು, ಈ ಹೂಳೆತ್ತುವ ಕೆಲಸ ತ್ವರಿತ ವಾಗಿ ತೆಗೆದುಕೊಳ್ಳುವ ಆವಶ್ಯಕತೆಯು ಸರ್ಕಾರದ ಗಮನದಲ್ಲಿ ಇದೆ. ದಿನಾಂಕ ೨೮-೧೧-೮೬ ರಂದು ಮಂಗಳೂರಿನಲ್ಲಿ ಜರುಗಿದ ಮೀನುಗಾರರ ಪರಿಷತ್ ಸಭೆಯು ಆಗುವ ಮುನ್ನವೇ ದಿನಾಂಕ ೧೪-೧೧-೮೬ ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವಿಧಾನ ಸಭಾ ಸದಸ್ಯರು ಮತ್ತು ವಿಧಾನ ಪರಿಷತ್ತಿನ ಸದಸ್ಯರೊಂದಿಗೆ ಹಾಗೂ ಮೀನುಗಾರರ ಮುಖಂಡರೊಂದಿಗೆ ಸವಿಸ್ತಾರ ಚರ್ಚೆ ನಡೆಸಲಾಗಿತ್ತು. ಈ ಸಭೆಯ ನಿರ್ಣಯದಂತೆ ಸರ್ಕಾರವು ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶಕರು, ಕಾರವಾರ, ಮಂಗಳೂರಿನ ಬಂದರು ಅಧಿಕಾರಿ ಮತ್ತು ಮೂರು ಮಂದಿ ಮೀನುಗಾರ ಮುಖಂಡರನ್ನು ಕೇರಳ ಸರ್ಕಾರದ ಬಂದರು ನಿರ್ದೇಶಕರೊಡನೆ ಹೂಳೆತ್ತುವ ಯಂತ್ರವನ್ನು ಕರ್ನಾಟಕಕ್ಕೆ ಒದಗಿಸುವ ಬಗ್ಗೆ ಮಾತುಕತೆಗೆ ಕಳುಹಿಸಿದರು. ಆದರೆ ಕೇರಳ ಸರ್ಕಾರದ ಬಂದರು ಇಲಾಖೆಯ ನಿರ್ದೇಶಕರು ಆವರ ರಾಜ್ಯದಲ್ಲಿ ಹೂಳೆತ್ತುವ ಕಾರ್ಯಾಚರಣೆಯನ್ನು ಮಾಡುತ್ತಿರುವುದರಿಂದ ಹೂಳೆತ್ತುವ ಯಂತ್ರವನ್ನು ಒದಗಿಸುವ ವಿಚಾರದಲ್ಲಿ ಅಸಹಾಯಕತೆಯನ್ನು ವ್ಯಕ್ತಪಡಿಸಿದರು. ತದನಂತರ ಮುಂಬಯಿ ಮೂಲದ ಮೆಸರ್ಸ್ ಏಸ್.ಆರ್. ಕನ್ಸ್‌ಟ್ರಕ್ಷನ್ ಕಂಪನಿಯವರು ನೂತನ ಬಂದರು ಮಂಗಳೂರು ಇಲ್ಲಿ ಕಾರ್ಯ ನಿರ್ವಹಿಸುತ್ತಿರುವ ಇವರ ಹೂಳೆತ್ತುವ ಯಂತ್ರದ ಬಗ್ಗೆ ಸಂಪರ್ಕಿಸಲಾಯಿತು. ಸರ್ಕಾರವು ಹೂಳೆತ್ತುವ ಕೆಲಸಕ್ಕೆ ಮಂಜೂರಾತಿ ನೀಡಿದೆ. ಆದರೆ ತಾಂತ್ರಿಕ ಉಪ ಸಮಿತಿಯು ಈ ಕೆಲಸದ ಸಾಧ್ಯತೆಯ ಬಗ್ಗೆ ಪರಿಶೀಲಿಸಿ ಆನಂತರ ಕಂಟ್ರಾಕ್ಟನ್ನು ಕೊಡಲಿಕ್ಕೆ ಸೂಚಿಸಲಾಗಿದೆ. ತಾಂತ್ರಿಕ ಉಪ ಸಮಿತಿಯು ೪-೧೨-೮೬ ರಂದು ಬೆಂಗಳೂರಿನಲ್ಲಿ ಸಭೆ ನೆರೆ ನದಿಯ ಮುಖ್ಯ ಪ್ರದೇಶದಲ್ಲಿ ಹೂಳೆತ್ತು ವುದರಿಂದ ಮತ್ತು ಅದು ಬೇಗನೇ ತುಂಬುವುದರಿಂದ ಇದು ಪ್ರಯೋಜನಕ್ಕೆ ಆಗಲಾರದು ಎನ್ನುವ ಕಂಪನಿಯ ವಶದಲ್ಲಿರುವ ಗ್ರ್ಯಾಬ್ ಡ್ರೆಜ್ಜರ್ ನದಿಯ ಮುಖಜಿದಲ್ಲಿ ಹೂಳೆತ್ತುವ ಕಾರ್ಯವನ್ನು ಸಮರ್ಪಕವಾಗಿ ಮಾಡಬಹುದೆಂದು ಆಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆದಾಗ್ಯೂ ಒಂದೆರಡು ದಿನಗಳು ಪ್ರಾಯೋಗಿಕವಾಗಿ ಹೂಳೆತ್ತುವ ಕಾರ್ಯವನ್ನು ಮಾಡಬೇಕೆಂದು ಅಭಿಪ್ರಾಯಪಟ್ಟಿರುವರು. ಆದರೆ ಹೂಳೆತ್ತುವ ಮಾನ್ಯ ಮತ್ತು ನಂತರ ಆಳಗಾಗಿ ಆಳವನ್ನು ಆಳತೆ ಮಾಡಬೇಕಾದ್ದು ಎಂದು ಸ್ಪಷ್ಟವಾಗಿ ಸೂಚಿಸಿದ್ದಾರೆ. ಈ ಷರತ್ತಿಗೆ ಮೇಲಿನ ಕಂಪನಿಯವರು ಒಪ್ಪಲಿಲ್ಲ. ಹೀಗಾಗಿ ಹೂಳೆ ತ್ತುವ ಕೆಲಸವನ್ನು ಕೊಡಲು ಸಾಧ್ಯವಾಗಿಲ್ಲ.

ಬಂದರು ಇಲಾಖೆಯ ನಿರ್ದೇಶಕರು ತಪ್ಪು ಪತ್ರ ಸಂಖ್ಯೆ ಬಿ.ಇಸಿ.ಸಿಐ.೭೧:೮೬-೮೭, ದಿನಾಂಕ ೨೪-೧೧-೮೬ರ ಪತ್ರದಲ್ಲಿ ಟೆಂಡರ್‌ನ್ನು ಕರೆದು ದಿನಾಂಕ ೩-೧೨-೮೬ನ್ನು ಟೆಂಡರಿನ ಕಡೆಯ ದಿನಾಂಕ

ವೆಂದು ನಿಗದಿಪಡಿಸಲಾಯಿತು. ಇದಕ್ಕೆ ಉತ್ತರವಾಗಿ ಕಲ್ಕತ್ತೆಯ ಮೆಸರ್ಸ್ ಜೋಸ್ ಪ್ರೆಜ್ಜಿಂಗ್ ಸರ್ವೀಸ್‌ರವರಿಂದ ಒಂದೇ ಒಂದು ಟೆಂಡರು ಬಂದಿರುತ್ತದೆ. ಈ ಟೆಂಡರು ಸರ್ಕಾರದ ಪರಿಶೀಲನೆಯಲ್ಲಿದೆ.

ಈ ಬಗ್ಗೆ ಸರ್ಕಾರವು ಲೇಫ್ಸದಲ್ಲಿ ನಿರ್ಣಯ ತೆಗೆದುಕೊಂಡು ಕೆಲಸವನ್ನು ಕೈಗೊಳ್ಳಲಾಗುವುದು.

(೬) ರೈತರು ಕಾರ್ಖಾನೆಗಳಿಗೆ ಸರಬರಾಜು ಮಾಡಿದ ಕಬ್ಬಿನ ಹಣಪಾವತಿಯಲ್ಲಿ ನಿಧಾನವಾಗಿರುವ ಬಗ್ಗೆ

ಶ್ರೀ ಮುಲ್ಲಾರಿಗೌಡ ಎಸ್. ಪಾಟೀಲ್.—ಅಧ್ಯಕ್ಷರೇ, ಕರ್ನಾಟಕದಲ್ಲಿ ರೈತರಿಗೆ ಕೊಡ ಬೇಕಾಗುವ ಕಬ್ಬಿನ ಬಿಲ್ಲು ಕೊಡದಿರುವುದರಿಂದ ಆರ್ಥಿಕ ಮುಗ್ಗಟ್ಟಿಗೆ ಒಳಪಡಬೇಕಾಗಿದೆ. ೧೯೮೬-೮೭ರ ಸಾಲಿನಲ್ಲಿ ಪೂರೈಕೆ ಮಾಡಿರುವ ಕಬ್ಬು ಸುಲಿಸಿ ಸಕ್ಕರೆ ಮಾರಿ ಹಲವಾರು ದಿನ ಗಳಾದರೂ ಕೂಡ ಕಾರ್ಖಾನೆಗಳಿಂದ ರೈತರಿಗೆ ಕೊಡಬೇಕಾಗಿರುವ ಕಬ್ಬಿನ ಬಿಲ್ಲನ್ನು ಕೊಡದಿರುವುದು ಸರಕಾರದ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ರೈತರಿಗೆ ಕೊಡಬೇಕಾಗಿರುವ ಮುದ್ದತಿ ತೇವಣಿ ಗಳ ಮರುಪಾವತಿಯಲ್ಲಿ ಕೆಲವೊಂದು ಕಾರ್ಖಾನೆಗಳಿಂದ ತಡವಾಗಿರುವುದು, ರೈತವರ್ಗಕ್ಕೆ ಕೊಡ ಬೇಕಾಗಿರುವ ಬಾಕಿ ಹಣಕ್ಕೆ ಸರಕಾರದಿಂದ ಮಂಜೂರಾತಿ ಸಿಕ್ಕಿಲ್ಲವೆಂದು ಕೇಳಿಬರುತ್ತದೆ. ಈ ತಿಂಗಳ ೧೫ರ ಒಳಗಾಗಿ ರೈತರಿಗೆ ಸಲ್ಲಬೇಕಾಗಿರುವ ಬಾಕಿ ಹಣವನ್ನು ಸಂಪೂರ್ಣವಾಗಿ ಕೊಡುವಂತೆ ಆದೇಶ ಇಟ್ಟು, ಸರಕಾರ ಕೂಡಲೇ ಕ್ರಮ ಕೈಕೊಳ್ಳಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಆರ್ ಎಲ್. ಜಾಲಪ್ಪ.—ಪರ್ಚೆಕ್ಯೂಲರಾಗಿ ಯಾವ ಕಾರ್ಖಾನೆ ಹಣ ಕೊಟ್ಟಿಲ್ಲವೆಂದು ಹೇಳಿಲ್ಲ. ನನಗೂ ಮತ್ತು ಮಾನ್ಯ ಕೈಗಾರಿಕಾ ಮಂತ್ರಿಗಳಿಗೆ ಕೆಲಕೆಲವು ಬರುತ್ತವೆ. ನನಗೆ ಸಂಬಂಧ ಪಟ್ಟ ಫ್ಯಾಕ್ಟರಿಗಳಲ್ಲಿ ಏನಾದರೂ ಕೊಡದೇ ಇದ್ದರೆ ಅದನ್ನು ಕೊಡಿಸುವುದಕ್ಕೆ ಪ್ರಯತ್ನ ಮಾಡು ತ್ತೇನೆ. ಹಾಗೂ ಈ ವಿಷಯವನ್ನು ಕೈಗಾರಿಕಾ ಮಂತ್ರಿಗಳ ಗಮನಕ್ಕೂ ಕೂಡಾ ತರುತ್ತೇನೆ.

(೭) ಶಿವಮೊಗ್ಗ ಜಿಲ್ಲೆಯ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರುಗಳನ್ನು ನೇಮಿಸುವ ಬಗ್ಗೆ

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ

೧) ನಿಟ್ಟೂರು ಪ್ರಾಥಮಿಕ ಆರೋಗ್ಯ ಕೇಂದ್ರ,
೨) ಸಂಪೆಕಟ್ಟೆ ಮೂರುಕೈ ಪ್ರಾಥಮಿಕ ಆರೋಗ್ಯ ಕೇಂದ್ರ,
೩) ನಗರ ಪ್ರಾಥಮಿಕ ಆರೋಗ್ಯ ಕೇಂದ್ರ,
೪) ಹೊಸನಗರ ಜನರಲ್ ಆಸ್ಪತ್ರೆ,
೫) ಕೊಡೂರು ಪ್ರಾಥಮಿಕ ಆರೋಗ್ಯ ಕೇಂದ್ರ,
೬) ಸೊನಲೆ ಪ್ರಾಥಮಿಕ ಆರೋಗ್ಯ ಕೇಂದ್ರ,

ಇವುಗಳಿಗೆ ಕೆಲ ವರ್ಷಗಳಿಂದ ವೈದ್ಯರೇ ಇರುವುದಿಲ್ಲ. ಈ ಪ್ರದೇಶಗಳು ಮಲೆನಾಡು ಪ್ರದೇಶ ವಾಗಿದ್ದು, ಚಿಕ್ಕಸಾಪೇಹಕ್ಕಲು, ಪರಾಹಿ, ಯೋಜನಾ ಪ್ರದೇಶವಾಗಿರುವುದರಿಂದ ಪ್ರತಿನಿತ್ಯ ಅಪಘಾತ ಗಳು ಸಂಭವಿಸುತ್ತಿದ್ದು, ಆಸ್ಪತ್ರೆ ಇದ್ದೂ ಜನರಿಗೆ ಪ್ರಯೋಜನ ಸಿಕ್ಕಿಲ್ಲ. ಆಲ್ಲದೇ ಮಂಗನ ಕಾಯಿಲೆಗೆ ಹೆಸರುವಾಸಿಯಾದ ಹೊಸನಗರ ತಾಲ್ಲೂಕಿನಲ್ಲಿ ಮೇಲ್ಕಂಡ ೬ ಆಸ್ಪತ್ರೆಗಳಲ್ಲಿ ವೈದ್ಯರು ಇಲ್ಲದೇ ಇರುವುದನ್ನು ಪುಲಬಾಳು ಸಾರಿ ಸಂಬಂಧಪಟ್ಟವರಿಗೆ, ಸರ್ಕಾರಕ್ಕೆ ತಿಳಿಸಿದಾಗ್ಯೂ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಆರೋಗ್ಯ ಇಲಾಖೆ ಮತ್ತು ಸರ್ಕಾರ ರಾಜ್ಯದಲ್ಲಿ ಇದೆಯೋ ಇಲ್ಲವೋ ಎಂಬುದನ್ನು ಪ್ರಶ್ನಿಸಿ ಸದನದ ಗಮನ ಸೆಳೆಯುತ್ತಿದ್ದೇನೆ.